**ಅಸಲು ದಾವಾ ಸಂಖ್ಯೆಃ 917 /2017**

**ಪಿ.ಡಬ್ಲೂ -1**

ದಿಃ 22-08-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು ಶ್ರೀ. G.G.P ರವರಿಂದಃ-**

1. ದಾವಾ ಆಸ್ತಿಯು 6 ಗುಂಟೆ ಇದ್ದು ಅದು ಆರ ಎಸ ನಂಬರ 17/2 ಬಸವನ ಕುಡಚಿ ಗ್ರಾಮದ ಭಾಗವಾಗಿರುತ್ತದೆ. ದಾವಾ ಆಸ್ತಿಯ ಚೆಕ್ಕು ಬಂದಿ ಪೂರ್ವಕ್ಕೆ ಶಿಂದೊಳ್ಳಿ ರಸ್ತೆ, ಪಶ್ಚಿಮಕ್ಕೆ ಪ್ರತಿವಾದಿಯ ಆಸ್ತಿ, ಉತ್ತರಕ್ಕೆ ಜಿನ್ನಪ್ಪಾ ಮುತಗಿ ಅವರ ಜಮೀನು, ದಕ್ಷಿಣಕ್ಕೆ ರಸ್ತೆ ಇದೆ. ಈಗ ಹೇಳಿರುವ ಚೆಕ್ಕು ಬಂದಿ ಸುಳ್ಳು ಇದೆ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ

ನಮೂದಿಸಿರುವ ಚೆಕ್ಕು ಬಂದಿ ಕೂಡ ತಪ್ಪು ಇದೆ ಎಂದರೆ ಸರಿಯಲ್ಲ.ನೀವು ನ್ಯಾಯಾಲಯದಲ್ಲಿ ಈ ದಾವೆ ಸಲ್ಲಿಸಲು ನಾನು ವಿವೇಕ ಕುಲಕರ್ಣಿ ವಕೀಲರಿಗೆ ಮಾಹಿತಿಯನ್ನು ನೀಡಿರುತ್ತೇನೆ. ವಾದ ಪತ್ರದಲ್ಲಿ ನಮೂದಿಸಿದ ಚೆಕ್ಕು ಬಂದಿ ಮತ್ತು ನೀವು ನ್ಯಾಯಾಲಯದಲ್ಲಿ ನುಡಿದಿರುವ ಚೆಕ್ಕು ಬಂದಿಗಳು ಸಂಪೂರ್ಣ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ.

2. 2008 ರಲ್ಲಿ ಪ್ರತಿವಾದಿಯು ನಿಮ್ಮಿಂದ ರೂ.50000/-ಕೈ ಸಾಲ ಪಡೆದಿರುತ್ತಾರೆ ಎಂದರೆ ರೂ.50000/- ಅಲ್ಲ ಹೆಚ್ಚಿನ ಕೈ ಸಾಲ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ರೂ.50000/- ಕೈಗಡ ಸಾಲವನ್ನು ಪ್ರತಿವಾದಿಗೆ ನೀಡುವಾಗ ಒಂದು ಕಾಗದ ಪತ್ರವನ್ನು ಬರೆದುಕೊಡಬೇಕೆಂದು ಹೇಳಿದ್ದಿರಿ ಎಂದರೆ ಸರಿ. ಸದರಿ ಕಾಗದ ಪತ್ರವನ್ನು ಬರೆಯಿಸಲು ಪ್ರತಿವಾದಿಯನ್ನು ನೋಟರಿ ಬಳಿ ಕರೆದುಕೊಂಡು ಹೋಗಿರುತ್ತೇನೆ ಎಂದರೆ ಸರಿ. ಸದರಿ ನೋಟರಿ ಅವರ ಬಳಿ ಹೋದಾಗ ಪ್ರತಿವಾದಿ ಅವರಿಗೆ ಸಾಲಕ್ಕೆ ಭದ್ರತೆ ಆಗಿ ದಾಖಲೆಯನ್ನು ಬೆರಯಿಸುವುದಾರಿ ಹೇಳಿ ನನ್ನ ಹೆಂಡತಿಯ ಹೆಸರಿನಲ್ಲಿ ಪ್ರತಿವಾದಿಯಿಂದ ಸಾಮಾನ್ಯ ಮುಖ್ತಾರ ನಾಮೆಯನ್ನು ಬರೆಯಿಸಿರುತ್ತೇನೆ ಎಂದರೆ ಸರಿ. ನನ್ನ ಹೆಂಡತಿ ಹೆಸರು ಶೋಭಾ ಆಗಿರುತ್ತದೆ. ನನ್ನ ಹೆಂಡತಿಯು ಸಾಮಾನ್ಯ ಮುಖ್ತಾರ ನಾವೆಯ ಆಧಾರದ ಮೇಲೆ ದಾವಾ ಆಸ್ತಿಗೆ ಸಂಬಧಿಸಿದಂತೆ ಒಂದು ಸಮ್ಮತಿ ಪತ್ರವನ್ನು ನನ್ನ ಹೆಸರಿಗೆ ಬರೆದು ನೀಡಿರುತ್ತಾರೆ ಎಂದರೆ ಸರಿ. ಸದರಿ ಸಮ್ಮತಿ ಪತ್ರದ ಆಧಾರದ ಮೇಲೆ ನಾನು ದಾವಾ ಆಸ್ತಿಯ ಪಹಣಿ ಪತ್ರಿಕೆಯಲ್ಲಿ ನನ್ನ

ಹೆಸರನ್ನು ನಮೂದು ಮಾಡಿಸಿರುತ್ತೇನೆ ಎಂದರೆ ಸರಿ.

2. ಸರ್ವೆ ನಂಬರ 17/2 ಒಟ್ಟು ಏರಡೂವರೆ ಎಕರೆ ವಿಸ್ತೀರ್ಣ ಇದೆ. ಸರ್ವೆ ನಂಬರ 17/2 ರಲ್ಲಿ ಪ್ರತಿವಾದಿ ಹಾಗೂ ಆತನ ಸಹೋದರ, ಸಹೋದರಿಯರಿಗೆ ಪಾಲು ಇದೆ ಎಂದರೆ ಸರಿ. ಸರ್ವೆ ನಂಬರ 17/2 ರಲ್ಲಿ ಪ್ರತಿವಾದಿಯ ಪಾಲು ಎಷ್ಟು ಇತ್ತು ಎಂದರೆ ಏರಡುವರೆ ಎಕರೆ ಇತ್ತು ಎಂದು ನುಡಿಯುತ್ತಾರೆ. ಸಮ್ಮತಿ ಪತ್ರದ ಆಧಾರದಲ್ಲಿ ಪಹಣಿ ಪತ್ರಿಕೆಯಲ್ಲಿ ನಿಮ್ಮ ಹೆಸರು ನಮೂದಿಸಿದ ನಂತರ ಪೋಡಿ ಮಾಡಿಸಿರುತ್ತೀರಿ ಎಂದರೆ ಪ್ರತಿವಾದಿಯೇ ಮಾಡಿಸಿ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯರು ಪೋಡಿ ಮಾಡಿಸಿದ್ದಾರೆ ಎಂದು ತೋರಿಸಲು ಪ್ರತಿವಾದಿಯು ನೀಡಿದ ಅರ್ಜಿಯನ್ನು ಭೂಮಾಪನ ಇಲಾಖೆಯಿಂದ ತಂದು ನ್ಯಾಯಾಲಯಕ್ಕೆ ಹಾಜರ ಪಡಿಸಲು ನನಗೆ ತೊಂದರೆ ಇಲ್ಲ. ದಾವಾ ಆಸ್ತಿಯು ನಿಮ್ಮ ಹೆಸರಿಗೆ 17/11 ಎಂದು ಭಾಗ ಆಗಿದೆ ಎಂದರೆ ಸರಿ. ಪ್ರತಿವಾದಿಯು ನಿಮ್ಮ ಹೆಂಡತಿಯ ಹೆಸರಿಗೆ ಸಾಮಾನ್ಯ ಮುಖ್ತಾರ ನಾಮೆಯನ್ನು ಬೆರಯಿಸಿದ ಬಗ್ಗೆ, ನೀವು ನಿಮ್ಮ ಹೆಂಡತಿಯಿಂದ ಸಮ್ಮತಿ ಪತ್ರವನ್ನು ದಾವಾ ಆಸ್ತಿಗೆ ಸಂಬಂಧಿಸಿದಂತೆ ಪಡೆದ ಬಗ್ಗೆ ಮತ್ತು ದಾವಾ ಆಸ್ತಿಯು ಪೋಡಿ ಆದ ಬಗ್ಗೆ ಪ್ರತಿವಾದಿಗೆ ನೀವು ತಿಳಿಸಿಲ್ಲ ಮತ್ತು ಆ ಬಗ್ಗೆ ರೆವಿನ್ಯೂ ಇಲಾಖೆಯಿಂದ ಪ್ರತಿವಾದಿಗೆ ಯಾವುದೇ ನೋಟಿಸ ಬಂದಿಲ್ಲ ಎಂದರೆ ಸರಿಯಲ್ಲ. ನೀವು ನೋಟರಿ ಕಚೇರಿಯಲ್ಲಿ ಪ್ರತಿವಾದಿಗೆ ಯಾವುದೇ ವಿಚಾರವನ್ನು ತಿಳಿಸದೆ ಅವರ ಸಹಿಯನ್ನು ಜಿಪಿಎಗೆ ಮತ್ತು ಇತರ

ಕೆಲವು ಖಾಲಿ ದಾಖಲೆಗಳಿಗೆ ಪಡೆಯಲಾಗಿದೆ ಎಂದರೆ ಸರಿಯಲ್ಲ. ಪ್ರತಿವಾದಿಯು ಉತಾರೆಯನ್ನು ತೆಗೆದು ನೋಡಲಾಗಿ ಎಮ.ಆರ ವರದಿಯ ಪ್ರಕಾರ ನಿಮ್ಮ ಹೆಸರು ದಾಖಲಾಗಿತ್ತು ಎಂದರೆ ಸರಿ. ಪ್ರತಿವಾದಿಗೆ ನೀವು ದಾವಾ ಆಸ್ತಿಯ ಪೋಡಿ ಮಾಡಿದ ವಿಚಾರ , ನೋಟರಿ ಮತ್ತು ಸಮ್ಮತಿ ಪತ್ರವನ್ನು ಪಡೆದ ವಿಚಾರ ತಿಳಿದ ನಂತರ ಉಪ ಜಿಲ್ಲಾಧಿಕಾರಿ, ಅವರ ಮುಂದೆ ಆರಟಿಎಸ ಅಪೀಲ ನಂಬರ 211/2013-14 ರಂತೆ ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಆರಟಿಎಸ ಅಪೀಲನಲ್ಲಿ ನನ್ನ ಪರ ಎಮ ವಾಯ ಪಾಟೀಲ ವಕೀಲರು ಹಾಜರಾಗಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಆರ ಟಿ ಎಸ ಅಪೀಲನಲ್ಲಿ ನಿಮಗೆ ಉಪ ಜಿಲ್ಲಾಧಿಕಾರಿ ಕಚೇರಿಯಿಂದ ದಿನಾಂಕ 14-03-2014 ರಂದು ನೋಟಿಸ ತಲುಪಿರುತ್ತದೆ ಎಂದರೆ ಸರಿ. ಸದರಿ ಆರಟಿಎಸ ಅಪೀಲ ನಲ್ಲಿ ನಾನು ನೋಟಿಸಿನ ಮೇರೆಗೆ ಹಾಜರಾಗಿರುತ್ತೇನೆ ಎಂದರೆ ಸರಿ. ಸದರಿ ಆರಟಿಎಸ ಅಪೀಲನಲ್ಲಿ ಪ್ರತಿವಾದಿಯು ನಿಮಗೆ ಯಾವುದೇ ಕ್ರಯದ ಕರಾರನ್ನು ನೀಡಿಲ್ಲ ಎಂದು ನಮೂದಿಸಿದ್ದರು ಎಂದರೆ ಸರಿಯಲ್ಲ. ಆರಟಿಎಸ ಅಪೀಲನಲ್ಲಿ ಪ್ರತಿವಾದಿಯು ದಾವಾ ಆಸ್ತಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಮಾಡಿ ನೀಡಿಲ್ಲ ಎಂದು ನಮೂದಿಸಿರುವ ವಿಚಾರ ನನಗೆ ವಕೀಲರ ಮುಖಾಂತರ ಉಪ ಜಿಲ್ಲಾಧಿಕಾರಿ ಅವರ ಕಚೇರಿಯಲ್ಲಿ ಹಾಜರಾದಾಗ ತಿಳಿದು ಬಂದಿರುತ್ತದೆ ನನಗೆ ಗೊತ್ತಿಲ್ಲ. ಆರಟಿಎಸ ಅಪೀಲನಲ್ಲಿ ನಾನು ತಕರಾರನ್ನು ದಿಃ 17-11-2015 ರಂದು ಸಲ್ಲಿಸಿರುತ್ತೇನೆ

ಎಂದರೆ ಸರಿ. ಸಾಕ್ಷಿಯು ಸದರಿ ತಕರಾರಿನ ದೃಡಿಕೃತ ಪ್ರತಿಯನ್ನು ನೋಡಿ ಒಪ್ಪಿಕೊಂಡ ಮೇರೆಗೆ ಅದನ್ನ ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿ ಪ್ರತಿ ಪುಟದಲ್ಲಿ ತನ್ನ ಸಹಿ ಇದೆ ಸಾಕ್ಷಿ ಒಪ್ಪಿಕೊಂಡಿರುತ್ತಾರೆ. ಸದರಿ ಆರಟಿಎಸ ಅಪೀಲ ವಜಾಗೊಂಡಿರುತ್ತದೆ ಎಂದರೆ ಸರಿ. ಸದರಿ ಆದೇಶದ ವಿರುದ್ಧ ಮೇಲ್ಮನವಿಯನ್ನು ಜಿಲ್ಲಾಧಿಕಾರಿ ಅವರ ಮುಂದೆ ಆರಬಿಆರಟಿಎ ನಂಬರ 197/2015-16 ರಂತೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ನಾನು ವಕೀಲರ ಮುಖಾಂತರ ಹಾಜರಾಗಿದ್ದೇನು ಎಂದರೆ ಸರಿ. ಮೇಲ್ಮನವಿಯಲ್ಲಿ ಜಿಲ್ಲಾಧಿಕಾರಿಗಳ ಆದೇಶದಂತೆ ಪಹಣಿ ಪತ್ರಿಕೆಯಲ್ಲಿ ನನ್ನ ಹೆಸರನ್ನು ರದ್ದು ಗೊಳಿಸಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂಬರ 17/2 ರ ಯಾವುದೇ ಉತಾರೆಯಲ್ಲಿ ನನ್ನ ಹೆಸರು ನಮೂದು ಇಲ್ಲ ಎಂದರೆ ಎಂದರೆ ಸರಿಯಲ್ಲ. ಆರಟಿಎಸ ಅಪೀಲನಲ್ಲಿ ಇದ್ದ ಆಸ್ತಿ ಮತ್ತು ದಾವಾ ಆಸ್ತಿಯು ಒಂದೆ ಎಂದರೆ ಸರಿ. ಮಾರ್ಚ-2014 ರಲ್ಲಿಯೇ ಪ್ರತಿವಾದಿಯು ಆರಟಿಎಸ ಅಪೀಲನಲ್ಲಿ ನಿಮಗೆ ದಾವಾ ಆಸ್ತಿಗೆ ಸಂಬಧಿಸಿದಂತೆ ಯಾವುದೇ ದಾಖಲೆಯನ್ನು ಮಾಡಿಕೊಟ್ಟಿಲ್ಲ ಎಂಬ ವಿಚಾರ ತಿಳಿದಿದ್ದರು ಸಹ ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿ. ಈ ದಾವೆಯನ್ನು ನನಗೆ ವಿಚಾರ ತಿಳಿದ ಮೂರು ವರ್ಷದ ಒಳಗೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಿಪಿ-4 ರ ಉಲ್ಲೇಖವನ್ನು ಆರಟಿಎಸ ಅಪೀಲನಲ್ಲಿ ಸಲ್ಲಿಸಿದ ತಕರಾರಿನಲ್ಲಾಗಲಿ ಅಥವಾ ಜಿಲ್ಲಾಧಿಕಾರಿ ಅವರ ಮುಂದೆ ಸಲ್ಲಿಸಿದ ತಕರಾರು ಅಥವಾ ಲಿಖಿತ

ವಾದದಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ನಿಪಿ-4 ನ್ನು ಉಪ ಜಿಲ್ಲಾಧಿಕಾರಿ ಕಚೇರಿ ಹಾಗೂ ಜಿಲ್ಲಾಧಿಕಾರಿ ಕಚೇರಿಯಿಲ್ಲಿ ನಡಾವಳಿ ಸಮಯದಲ್ಲಿ ಹಾಜರ ಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ-4 ನ್ನು ಉಪ ಜಿಲ್ಲಾಧಿಕಾರಿ ಮತ್ತು ಜಿಲ್ಲಾಧಿಕಾರಿ ಕಚೇರಿಯಿಲ್ಲಿ ನಡಾವಳಿ ಸಮಯದ ಹಾಜರ ಪಡಿಸಿದ ಬಗ್ಗೆ ಉಲ್ಲೇಖ ಇರುವ ದಾಖಲೆಯನ್ನು ಈ ನ್ಯಾಯಾಲಯದಲ್ಲಿ ಹಾಜರಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ಉಪ ಜಿಲ್ಲಾಧಿಕಾರಿ ಕಚೇರಿ ಹಾಗೂ ಜಿಲ್ಲಾಧಿಕಾರಿ ಕಚೇರಿಯಿಲ್ಲಿ ನಡಾವಳಿ ಸಮಯದಲ್ಲಿ ನಿಪಿ-4 ರ ಬಗ್ಗೆ ಉಲ್ಲೇಖಿಸದೆ ಇದ್ದ ಕಾರಣ ನೀವು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಆ ಬಗ್ಗೆ ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ-4 ನ್ನು ಪ್ರತಿವಾದಿಯ ಸಹಿಯನ್ನು ಫೊರ್ಜರಿ ಮಾಡಿಸಿ ದಾಖಲೆಯನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರ ಪಡಿಸಿರುತ್ತೇನೆ ಎಂದರೆ ಸರಿಯಲ್ಲ.

3. ನಾನು ವ್ಯವಸಾಯ ಮಾಡುತ್ತೇನೆ. ನನಗೆ ಎರಡು ಎಕರೆ ಸ್ವಂತ ಜಮೀನು ಇದ್ದು ಮತ್ತು ಬೇರೆಯವರ ಆರು ಎಕರೆ ಜಮೀನನ್ನು ಲಾವಣಿಯ ಆಧಾರದಲ್ಲಿ ಮಾಡುತ್ತಿದ್ದೇನೆ. ನಾನು ಲಾವಣಿ ಆಧಾರದ ಮೇಲೆ ಜಮೀನಿನ ಉಳುಮೆಯನ್ನು ನಾನು ಅಂದಾಜು 22 ವರ್ಷ ವಯಸ್ಸಿನವನಾದಾಗಿನಿಂದ ಮಾಡುತ್ತಿದ್ದೇನೆ. ಲಾವಣಿ ಆಧಾರದ ಮೇಲೆ ಬೇರೆಯವರ ಜಮೀನನ್ನು ಉಳುಮೆ ಮಾಡುತ್ತಿದ್ದೇನೆ ಎಂದು ತೋರಿಸಲು ನನ್ನ ಬಳಿ ಯಾವುದೇ ಲಿಖಿತ ದಾಖಲೆ ಇಲ್ಲ ಮೌಖಿಕ ಸಾಕ್ಷ್ಯವನ್ನು ನ್ಯಾಯಾಲಯದಲ್ಲಿ ಮಾಡಿಸಬಹುದು ಎಂದು

ನುಡಿಯುತ್ತಾರೆ. ಯಾವುದೇ ಜಮೀನನ್ನು ಲಾವಣಿ ಆಧಾರದಲ್ಲಿ 1976 ರಿಂದ ಕಾಯಿದೆ ಪ್ರಕಾರ ರದ್ದು ಗೊಂಡಿರುತ್ತದೆ ಎಂದರೆ ಸರಿ. ನಾನು 6 ಎಕರೆ ಜಮೀನನ್ನು ಲಾವಣಿ ಆಧಾರದಲ್ಲಿ ಉಳುಮೆ ಮಾಡುತ್ತಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಾನು ನನ್ನ ಎರಡು ಎಕರೆ ಜಮೀನನಲ್ಲಿ ಒಂದು ಎಕರೆ ಕಬ್ಬು ಮತ್ತು ಒಂದು ಎಕರೆ ಭತ್ತ ಬೆಳೆಯುತ್ತಿದ್ದೇನೆ. ನಾನು ವಾರ್ಷಿಕ 35 ರಿಂದ 36 ಚೀಲ(ಅಂದಾಜು 80-85 ಕೆಜಿ) ಭತ್ತ ಬೆಳೆಯುತ್ತಿದ್ದೇನೆ. ಭತ್ತ ಬೆಳೆಯಲು ಕೂಲಿ ಮತ್ತು ಉಳುಮೆ ಖರ್ಚು ಬರುತ್ತದೆ ಎಂದರೆ ಸರಿ. ಭತ್ತದ ಬೆಳೆಯಲ್ಲಿ ಭತ್ತದ ಬೆಳೆಯಲ್ಲಿ ಶೇಕಡಾ 50 ರಷ್ಟು ಖರ್ಚು ಬರುತ್ತದೆ ಎಂದರೆ ಸಾಕ್ಷಿಯು ನಮ್ಮ ಮನೆಯ ನಾಲ್ಕು ಆಳು ದುಡಿಯುವುದರಿಂದ ಶೇಕಾಡಾ 25 ರಷ್ಟು ಖರ್ಚು ಬರುತ್ತದೆ ಎಂದು ನುಡಿಯುತ್ತಾರೆ. 2008 ರಲ್ಲಿ ಭತ್ತದ ಬೆಲೆ ಕ್ವಿಂಟಾಲಗೆ 1500 ಇತ್ತು. ಈಗ ಭತ್ತದ ಬೆಲೆ ಕ್ವಿಂಟಾಲಗೆ 2500-2600 ರೂ ಗಳು ಇವೆ. ನಾನು ಒಂದು ಎಕರಗೆ 42 ರಿಂದ 45 ಟನ ಕಬ್ಬು ಬೆಳೆಯುತ್ತೇನೆ. ಕಬ್ಬಿನ ಬೆಳೆ ನಾಟಿ ಮಾಡಿದ ವರ್ಷ ಹೆಚ್ಚಿನ ಬೆಳೆ ಬಂದು ನಂತರದ ವರ್ಷದಲ್ಲಿ ಕಡಿಮೆ ಬೆಳೆ ಬರುತ್ತದೆ ಎಂದರೆ ಸರಿ. ನಾನು ನನ್ನ ಹೊಲದಲ್ಲಿ ಬೆಳೆದ ಕಬ್ಬನ್ನು ಬೆಡಿಕೆ ಹಾಳ ಅಥಣಿ ತಾಲೂಕಿನ ಸಕ್ಕರೆ ಕಾರ್ಖಾನೆಗೆ ನೀಡುತ್ತೇನೆ. ಕಬ್ಬಿನ ಬೆಳೆಯಲ್ಲಿ ಪ್ರಸ್ತುತ ಖರ್ಚು ಹೆಚ್ಚು ಬಂದು ಆದಾಯ ಕಮ್ಮಿ ಬರುತ್ತದೆ ಎಂದರೆ ಶೇಕಡಾ 20

ಖರ್ಚು ಬಂದು ಶೇಕಡಾ 80 ಲಾಭ ಬರುತ್ತದೆ ಎಂದು ನುಡಿಯುತ್ತಾರೆ. ನಾನು ಈ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ಎಕರೆ ಜಮೀನಿಗೆ ಕಬ್ಬಿನ ಬೆಳೆಯಲ್ಲಿ 15 ರಿಂದ 20 ಸಾವಿರ ರೂ ಆದಾಯ ಬರುತ್ತದೆ ಎಂದರೆ ರೂ.80,000/- ಬರುತ್ತದೆ ಎಂದು ನುಡಿಯುತ್ತಾರೆ. ಭತ್ತದ ಬೆಳೆಯು ಮಳೆ ಆಧಾರಿತ ಬೆಳೆ ಎಂದರೆ ಸರಿ.

5. ನಮ್ಮ ಮನೆಯಲ್ಲಿ ನಾವು ಆರು ಜನ ವಾಸ ಇದ್ದೇವೆ. 2008 ಮತ್ತು ಅದಕ್ಕಿಂತ ಪೂರ್ವದಲ್ಲಿ ನಮ್ಮ ಮನೆಯಲ್ಲಿ 7 ಮಂದಿ ವಾಸವಿದ್ದೇವು. ನನಗೆ ಇಬ್ಬರು ಹೆಣ್ಣು ಮಕ್ಕಳು ಇಬ್ಬರು ಗಂಡು ಮಕ್ಕಳು ಇರುತ್ತಾರೆ. ನನ್ನ ಒಬ್ಬ ಮಗ ಖಾಸಗಿ ನೌಕರಿ ಕಳೆದ 4 ವರ್ಷಗಳಿಂದ ಮಾಡುತ್ತಿದ್ದು ಒಬ್ಬ ಮಗ ಶಾಲೆ ಕಲಿತಿಲ್ಲ. ನನ್ನ ಇಬ್ಬರು ಹೆಣ್ಣು ಮಕ್ಕಳಲ್ಲಿ ಒಬ್ಬಾಕೆ ಮದುವೆ ಮಾಡಿದ್ದು ಆಕೆ ಮೃತ ಪಟ್ಟಿರುತ್ತಾರೆ. ಇನ್ನೊಬ್ಬಾಕೆ ಮದುವೆಯನ್ನು ಮಾಡಿರುವುದಿಲ್ಲ.

6. 2008 ರಲ್ಲಿ ಪ್ರತಿವಾದಿಗೆ ನಾನು 1,41,500/- ರೂಗಳನ್ನು ನೀಡಿರತ್ತೇನೆ. ಸದರಿ ಹಣವು ನಮ್ಮ ಮನೆಯಲ್ಲಿ ಇದ್ದು ಅದನ್ನು ನಾನು ನಗದು ರೂಪದಲ್ಲಿ ನೀಡಿರುತ್ತೇನೆ. ಆ ಸಮಯದಲ್ಲಿ ನನಗೆ ಸಂಬಂಧಿಸಿದ ಯಾವುದೇ ಬ್ಯಾಂಕ ಖಾತೆ ಇರಲಿಲ್ಲ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**
**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**